( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

ದಿನಾಂಕ : 17/10/2019

ಅಸಲು ದಾವೆ. ನಂ. 2/2013

ಪಿ.ಡಬ್ಲ್ಯೂ-1

( ಪಾಟೀ ಸವಾಲು ಆರ್.ಸಿ ವಕೀಲರಿಂದ 4 ಮತ್ತು 5 ನೇ ಪ್ರ 2 ವಾದಿಯರ ಪರವಾಗಿ )

ಚನ್ನಮ್ಮನವರ ಯಜಮಾನರಾದ ಲಕ್ಕಯ್ಯ ತೀರಿಕೊಂಡು 30 ವರ್ಷಗಳು ಆಗಿವೆ. ಆ ಬಗ್ಗೆ ಮರಣಾ ಪ್ರಮಾಣ ಪತ್ರ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ತಾಯಿಯವರಿಗೆ 3 ಜನ ಹೆಣ್ಣುವ ಮಕ್ಕಳು ಒಬ್ಬ ಗಂಡು ಮಗ. ಅವರುಗಳೆಂದರೆ ಪುಟ್ಟಮ್ಮ, ರತ್ನಮ್ಮ, ನಾಗರಾಜು ಮತ್ತು ಧರ್ಮಮ್ಮ. ಪುಟ್ಟಮ್ಮನವರನ್ನು ಹಿರೇಹಳ್ಳಿ ಗ್ರಾಮದ ಶಿವಯ್ಯನವರಿಗೆ ಮದುವೆ ಮಾಡಲಾಗಿದೆ ಎಂದರೆ ಸರಿ. ನನ್ನನ್ನು ಆಲೂರು ತಾಲ್ಲೂಕು, ಭರತ್ತೂರು ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿದೆ. ನನ್ನ ಅಕ್ಕ ಪುಟ್ಟಮ್ಮನವರು ಮದುವೆಯಾಗಿ ಒಂದು ಮಗುವಾದ ನಂತರ ನನ್ನ ಮದುವೆಯಾಗಿರುತ್ತದೆ. ನನ್ನ ಮದುವೆಯಾಗಿ ನನಗೆ ಮೂರು ಮಕ್ಕಳಾದ ನಂತರ ಧರ್ಮಮ್ಮನವರ ಮದುವೆಯಾಗಿರುತ್ತದೆ.

ನನ್ನ ತಮ್ಮ ನಾಗರಾಜ ಚಿಕ್ಕವಯಸ್ಸಿನಲ್ಲಿಯೇ ವೀರಾಜಪೇಟೆಗೆ ಹೋಗಿ ನೆಲೆಸಿರುತ್ತಾರೆ. ನನ್ನ ತಮ್ಮ ನಾಗರಾಜು 1 ನೇ ಪ್ರತಿವಾದಿಯನ್ನು ಮದುವೆಯಾದ ಸಂದರ್ಭದಲ್ಲಿ ನಾನು ಮದುವೆಗೆ ಹೋಗಿರುವುದಿಲ್ಲ. ನನ್ನ ತಾಯಿ ಮತ್ತು ಅಕ್ಕತಂಗಿಯರು ಸಹ ಮದುವೆಗೆ ಹೋಗಿರುವುದಿಲ್ಲ. ಸದರಿ ವಿಚಾರವನ್ನು ನಾನು ಅವರುಗಳನ್ನು ಕೇಳಿ ತಿಳಿದುಕೊಂಡಿರುತ್ತೇನೆ.

ಪುಟ್ಟಮ್ಮ ಅವರ ಗಂಡ ಶಿವಯ್ಯ ಮತ್ತು ಅವರ ಮಗ ಮಂಜ ಅಜ್ಜೂರು ಗ್ರಾಮಕ್ಕೆ ನನ್ನ ತಮ್ಮನಿಗೆ ಹೆಣ್ಣು ಕೇಳಲು ಹೋದ ವಿಚಾರ ನನಗೆ ಗೊತ್ತಿಲ್ಲ. ಹೆಣ್ಣು ಕೇಳಿ ಬಂದ ನಂತರ ಪುಟ್ಟಮ್ಮ, ಶಿವಯ್ಯ, ಮಂಜ ಧರ್ಮಮ್ಮನ ಗಂಡ, ಲೋಕೇಶ್, ಧರ್ಮಮ್ಮ, ಮತ್ತು ಚನ್ನಮ್ಮ ರವರುಗಳು ಮತ್ತು ಹಿರೇಹಳ್ಳಿ ಗ್ರಾಮದ ಸಾಕಮ್ಮನವರು ಮದುವೆ ಮಾತುಕತೆಗೆ ಹೋದ ಬಗ್ಗೆ ನನಗೆ ಗೊತ್ತಿಲ್ಲ. ಈ ವಿಚಾರವನ್ನು ನನಗೆ ಈವರೆಗೆ ತಿಳಿಸಿಲ್ಲ. ಮದುವೆ ಮಾತುಕತೆಯಲ್ಲಿ 4 ನೇ ಪ್ರತಿವಾದಿಯ ತಂದೆಯಿಂದ 20 ಸಾವಿರ ವರದಕ್ಷಿಣೆ ಹಣ, ಒಂದು ಉಂಗುರ, ಒಂದು ಜೊತೆ ಓಲೆ ಹ್ಯಾಂಗಿಂಗ್ಸ್‌ನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಈ ಬಗ್ಗೆ ಪುಟ್ಟಮ್ಮನವರು ಸಾಕ್ಷಿ ವಿಚಾರಣೆ ಮಾಡಲು ನನಗೆ ತೊಂದರೆ ಇಲ್ಲ. ನನ್ನ ತಮ್ಮ ನಾಗರಾಜುವರಿಗೆ 4 ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಂಡು ಹಿರೇಹಳ್ಳಿ ಗ್ರಾಮದಲ್ಲಿ ಪುಟ್ಟಮ್ಮನವರು 2 ತಿಂಗಳು ಇರಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಮದುವೆಯಾದ 2 ತಿಂಗಳ ನಂತರ ನನ್ನ ತಮ್ಮ ನಾಗರಾಜು ಮತ್ತು 4 ನೇ ಪ್ರತಿವಾದಿ ವಿರಾಜಪೇಟೆಯ ಗಾಂಧಿನಗರದಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ.

ನನ್ನ ತಮ್ಮ ನಾಗರಾಜು ಮತ್ತು 4 ನೇ ಪ್ರತಿವಾದಿ ದಾಂಪತ್ಯದ ಫಲವಾಗಿ ಐಶ್ವರ್ಯ ಎಂಬ ಮಗು ಇದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಮಗುವಿನ ಹೆಸರು ಬೇಬಿ ಎಂದು ಯಾರಿಂದಲೋ ಕೇಳಿ ತಿಳಿದು ಬರೆಸಿರುತ್ತೇನೆ. ಮಗುವಿನ ಹೆಸರು ಐಶ್ವರ್ಯ ಎಂದು ಗೊತ್ತಿಲ್ಲದ ಕಾರಣ ಬೇಬಿ ಎಂದು ಬರೆಸಿರುತ್ತೇನೆ ಎಂದರೆ ಸರಿ. ಮಗುವಿಗೆ 9 ತಿಂಗಳು ಇರುವಾಗ ನನ್ನ ತಮ್ಮ ನಾಗರಾಜುರವರು ಮೃತಪಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಿರಾಜಪೇಟೆಯ ಗಾಂಧಿನಗರದ ನನ್ನ ತಮ್ಮನ ಮನೆಗೆ ನನ್ನ ಅಕ್ಕ, ಭಾವ, ತಂಗಿ ಮತ್ತು ಅವರ ಗಂಡ ಎಲ್ಲಾ ಹೋಗಿ ಬರುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುತ್ತಮ್ಮನವರಿಗೆ ಕಾವ್ಯ ದರ್ಶನ್ ಎಂಬ ಇಬ್ಬರು ಮಕ್ಕಳು.

ಮುಂದುವರೆದ ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿಯರ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು.

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.